ಪಿ.ಡಬ್ಲ್ಯೂ-1

ಸಾಕ್ಷಿಯು ಕ್ರಮವಾಗಿ ಪ್ರಮಾಣಿಕರಿಸಿದ ದಿನಾಂಕಃ 25-03-2023

ಪಾಟಿ ಸವಾಲುಃ ಶ್ರೀ. ಡಿ.ಕೆ.ಟಿ ವಕೀಲರಿಂದ

ನನ್ನ ತಂದೆ ಹೆಸರು ಹೆಚ್.ವಿ.ವೀರಯ್ಯ ಅವರು ಕೊಡ್ಲಿಪೇಟೆ ಹೋಬಳಿ ಹುಲ್ಕೊಡು ಗ್ರಾಮದವರು ಅವರಿಗೆ 4 ಜನ ಮಕ್ಕಳು ಇರುತ್ತಾರೆ ಅವರೆಂದರೆ ನಂಜುಂಡಯ್ಯ, ಮೀನಾಕ್ಷಿ, ವೇದಾವತಿ, ರತ್ನಮ್ಮ ಅಂದರೆ ನಾನು ಇರುತ್ತೇವೆ, ದಾವಾ ಆಸ್ತಿಯ ಸರ್ವೆ ನಂಬರ್ ಗಳು ಹುಲ್ಕೊಡು ಗ್ರಾಮಕ್ಕೆ ಸೇರಿದ ಕನ್ನೇಶ್ವರ ದೇವಸ್ಥಾನಕ್ಕೆ ಮೊದಲು ಸೇರಿದೆ ಎಂದರೆ ಸರಿ ಅದಕ್ಕೆ ದೇವರ ಜೋಡಿ ಎಂಬ ಇನ್ನೊಂದು ಹೆಸರು ಇತ್ತು, 1968 ರಿಂದ 2018 ರವರೆಗೂ ಹುಲ್ಕೊಡು ಗ್ರಾಮಸ್ಥರ ಹೆಸರಿನಲ್ಲಿ ಪಹಣಿ ಬರುತ್ತಿತ್ತು ಎಂದರೆ ಸರಿಯಲ್ಲ, ನನ್ನ ತಂದೆಗೆ 2018 ರಲ್ಲಿ ಮಂಜೂರಾಗಿರುತ್ತದೆ ಅದಕ್ಕಿಂತ ಮೊದಲು ಯಾರ ಹೆಸರಿನಲ್ಲಿತ್ತು ಎಂದು ನನಗೆ ಗೊತ್ತಿಲ್ಲ, ನನ್ನ ತಂದೆಗೆ ದಿಃ 03-03-2018 ರಲ್ಲಿ ಮಂಜೂರಾಗಿರುತ್ತದೆ, ಅದಕ್ಕಿಂತ ಹಿಂದೆ ಹುಲ್ಕೊಡು ಗಾಮಸ್ಥರ ಹೆಸರಿನಲ್ಲಿರುವುದು ನನಗೆ ಗೊತ್ತಿದ್ದರೂ ಸಹ ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ, ಪಹಣಿ ಆಗ ಗ್ರಾಮಸ್ಥರ ಹೆಸರಿನಲ್ಲಿತ್ತು ಎಂದರೆ ಸರಿ.

ದಿಃ 03-03-2018 ಭೂ ನ್ಯಾಯ ಮಂಡಳಿಯಿಂದ ನನ್ನ, ಮಂಜೂನಾಥ, ಶೋಭ ರವರ ಹೆಸರಿಗೆ ಮಂಜೂರಾತಿ ಆದೇಶ ಆಗಿರುತ್ತದೆ, ಸದರಿ ಆದೇಶದ ಮೇಲೆ ಪ್ರತಿವಾದಿಗಳು ಮೇಲ್ಮನವಿಯನ್ನು ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ಹಾಕಿ ಪ್ರಶ್ನಿಸಿರುತ್ತಾರೆ ಎಂದರೆ ಸರಿ, ದಿಃ 10-10-2022 ರಂದು ಸದರಿ ಮಂಜೂರಾತಿ ಆದೇಶ ವಜಾ ಆಗಿದೆ ಎಂದರೆ ಸರಿ ಅದರ ಮೇಲೆ ನಾವು ಮೇಲ್ಮನವಿಯನ್ನು

ನಾವು ಸಲ್ಲಿಸಿರುತ್ತೇವೆ, ಆ ಮೇಲ್ಮನವಿಯ ಪ್ರತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ, ನನ್ನ ತಂದೆ ಕನ್ನೇಶ್ವರ ದೇವಾಲಯದ ಅರ್ಚಕರಾಗಿದ್ದರು ಮತ್ತು ದಾವಾ ಆಸ್ತಿಯಲ್ಲಿ ವ್ಯವಸಾಯ ಸಹ ಮಾಡುತ್ತಿದ್ದರು, ದಾವಾ ಆಸ್ತಿಯನ್ನು ನನ್ನ ತಂದೆ ವ್ಯವಸಾಯ ಮಾಡಿಲ್ಲ ಎಂದರೆ ಸರಿಯಲ್ಲ, ದಾವಾ ಆಸ್ತಿಗಳು ದೇವರ ಕಮಿಟಿಗೆ ಸಂಬಂಧಿಸಿದ ಗ್ರಾಮಸ್ಥರು ವ್ಯವಸಾಯ ಮಾಡುತ್ತಿದ್ದರು ಎಂದರೆ ಸರಿಯಲ್ಲ, ದೇವಸ್ಥಾನದ ಅರ್ಚಕರಾಗಿದ್ದ ಆದಾರದಲ್ಲಿ ವ್ಯವಸಾಯ ಮಾಡುತ್ತಿದ್ದೇವೆ ಎಂದು ಸುಳ್ಳು ಹೇಳಿ ದಿಃ 03-03-2018 ರ ಆದೇಶ ಪಡೆದಿರುತ್ತೇವೆ ಎಂದರೆ ಸರಿಯಲ್ಲ.

ದಾವಾ ಆಸ್ತಿ ಈಗಲೂ ಹುಲ್ಕೊಡು ಗ್ರಾಮಸ್ಥರ ಸ್ವಾದೀನದಲ್ಲಿದೆ ಎಂದರೆ ಸರಿಯಲ್ಲ ನಮ್ಮ ಸ್ವಾದೀನದಲ್ಲಿದೆ ಎಂದು ಸಾಕ್ಷಿ ನುಡಿದಿರುತ್ತಾರೆ, ದಿಃ 03-03-2018 ರಂದು ನಾಮಕವಸ್ತೆ ಸ್ವಾದೀನದ ಆಧಾರದ ಮೇಲೆ ಆದೇಶ ಆಗಿದೆ ಆದರೆ ಭೌತಿಕ ಸ್ವಾದೀನದಲ್ಲಿ ನಾವು ಇದ್ದ ಕಾರಣದಿಂದ ಆದೇಶ ಆಗಿಲ್ಲ ಎಂದರೆ ಸರಿಯಲ್ಲ, ಆ ಆದೇಶ ಇಟ್ಟುಕೊಂಡು ದಾವಾ ಆಸ್ತಿಯಲ್ಲಿ ಸ್ವಾದೀನದಲ್ಲಿದ್ದ ಗ್ರಾಮಸ್ಥರನ್ನು ಹೊರಹಾಕುವ ಮತ್ತು ಪ್ರತಿವಾದಿಗಳನ್ನು ಹೊರ ಹಾಕುವ ಉದ್ದೇಶದಿಂದ ಪೊಲೀಸರಿಗೆ ಸುಳ್ಳು ದೂರು ಕೊಟ್ಟಿರುತ್ತೇವೆ ಎಂದರೆ ಸರಿಯಲ್ಲ, ನಮಗೆ ಆದ ಆದೇಶಕ್ಕಿಂತ ಮೊದಲು ಗ್ರಾಮಸ್ಥರು ಸ್ವಾದೀನದಲ್ಲಿದ್ದರು ಎಂದರೆ ಸರಿಯಲ್ಲ, ಅವರೇ ಮೊದಲು ಸ್ವಾದೀನದಲ್ಲಿದ್ದ ಕಾರಣ ನಮ್ಮ ಮೇಲೆ ಯಾವುದೇ ಹಸ್ತಕ್ಷೇಪ ಮಾಡಲು ಪ್ರಯತ್ನ ಪಟ್ಟಿಲ್ಲ ಎಂದರೆ ಸರಿಯಲ್ಲ.

ಕನ್ನೇಶ್ವರ ದೇವಸ್ಥಾನದ ಪೂಜೆ ಉಸ್ತುವಾರಿಯನ್ನು 2 ನೇ ಪ್ರತಿವಾದಿ ನೋಡಿಕೊಳ್ಳುತ್ತಿದ್ದರು ಎಂದರೆ ಸರಿಯಲ್ಲ(ವರ್ಷಿಪ್), ಅವರು ಸದರಿ ದೇವಸ್ಥಾನ ಸಮಿತಿಯ ಅಧ್ಯಕ್ಷರು ಆಗಿದ್ದರು ಎಂದರೆ ಸರಿಯಲ್ಲ, ನಾನಾಗಲೀ, ನನ್ನ ತಂದೆಯಾಗಲೀ ಯಾವುದೇ ಸಮಯದಲ್ಲೂ ಗೇಣಿದಾರರು ಆಗಿಲ್ಲ

ಎಂದರೆ ಸರಿಯಲ್ಲ, ಆ ದೇವಸ್ಥಾನ ಕಮಿಟಿ ಮತ್ತು ಅದಕ್ಕೆ ಸಂಬಂಧಿಸಿದ ದಾವಾ ಆಸ್ತಿ ದೇವಸ್ಥಾನದ ಅರ್ಚಕರಿಗೆ ಹಕ್ಕು ಬಾದ್ಯತೆಗಳು ಇಲ್ಲ ಎಂದರೆ ಸರಿಯಲ್ಲ, ನಾವು ಪಡೆದ ಆದೇಶ ರಾಜಕೀಯ ಶಿಫಾರಸ್ಸಿನ ಮೇಲೆ ಪಡೆದಿರುತ್ತೇವೆ ಎಂದರೆ ಸರಿಯಲ್ಲ ಅದು ಕಾನೂನು ಬದ್ದವಾದ ಆದೇಶವಾಗಿಲ್ಲ ಎಂದರೆ ಸರಿಯಲ್ಲ, ಸದರಿ ಮಂಜೂರಾತಿ ಆದೇಶ ಉಚ್ಚ ನ್ಯಾಯಾಲಯದಲ್ಲಿ ವಜಾ ಆದ ಕಾರಣ ದಾವಾ ಆಸ್ತಿಯ ಮೇಲೆ ನನಗೆ ಯಾವುದೇ ಹಕ್ಕಾಗಲೀ, ನ್ಯಾಯಾಲಯದಲ್ಲಿ ಹಕ್ಕು ಪ್ರತಿಪಾದನೆ ಮಾಡುವ ಹಕ್ಕಾಗಲಿ ಇರುವುದಿಲ್ಲ ಎಂದರೆ ಸರಿಯಲ್ಲ.

ದಿಃ 03-03-2018 ರ ಆದೇಶ ಇಟ್ಟುಕೊಂಡು ಊರಿನವರು ಮತ್ತು ಪ್ರತಿವಾದಿಗಳ ಮೇಲೆ ದೂರು ಕೊಟ್ಟಿದಲ್ಲದೇ ಈ ನ್ಯಾಯಾಲಯದಲ್ಲಿ ದಾವೆ ಹೂಡಿ ನ್ಯಾಯಾಲಯದ ಆದೇಶವನ್ನು ಉಲ್ಲಂಘನೆ ಮಾಡಿರುತ್ತಾರೆ ಎಂದು ಅನಾವಶ್ಯಕವಾಗಿ ತೊಂದರೆ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ, ನಮ್ಮ ಪೂರ್ವಿಕರು ದೇವಸ್ಥಾನದ ಅರ್ಚಕರು ಆದ ಕಾರಣ ದಾವಾ ಆಸ್ತಿಯ ಮೇಲೆ ಹಕ್ಕುನ್ನು ಚಲಾಯಿಸಲು ಅರ್ಹರಲ್ಲ ಎಂದರೆ ಸರಿಯಲ್ಲ, ನಾನು ಸುಳ್ಳು ದಾವೆ ಹಾಕಿರುವುದರಿಂದ ಪ್ರತಿವಾದಿಗಳಿಗೆ ತುಂಬಲಾರದ ನಷ್ಟ ಉಂಟಾಗಿದೆ ಎಂದರೆ ಸರಿಯಲ್ಲ, ಈ ದಾವಾದಲ್ಲಿ ಕೋರಿರುವ ವಿಚಾರ ಸುಳ್ಳಿನಿಂದ ಕೂಡಿದೆ ಎಂದರೆ ಸರಿಯಲ್ಲ.

ಪಾಟಿ ಸವಾಲು ಮುಕ್ತಾಯವಾಯಿತು.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ).

Sd/-
ಓ ಹೇ ಕೇ ಸರಿ ಇದೆ

ಪ್ರ ದ ನ್ಯಾ ದಂ ಸೋ ಪೇಟೆ